ಅ) ಬಂದಿದೆ.

ಆ) ನಿಜ. ಕರ್ನಾಟಕದ ನೀರಾವರಿ ಕಾಯಿದೆ ಮತ್ತು ನಿಯಮಗಳ ನಿಬಂಧನೆ ಪ್ರಕಾರ ದ್ವಿಗುಣ ಪ್ರಮಾಣದ ಕಂದಾಯವನ್ನು ವಸೂಲಿ ಮೇಲೆ ಹೇಳಿದಂತೆ ಭೂಮಿಯಿಂದ ವಸೂಲು ಮಾಡಬೇಕಾಗುತ್ತದೆ.

ಇ) ಮೇಲೆ ಹೇಳಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

3. ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ವಿಷಯ : ನೀರಾವರಿ ಇಲಾಖೆಯಲ್ಲಿ ದಿನಗೂಲಿ ಕೆಲಸಗಾರರನ್ನು ಖಾಯಂಗೊಳಿಸುವುದು.

ಪ್ರಶ್ನೆ : 184(648) ಶ್ರೀ ಪಂಪಾಪತಿ(ದಾವಣಗೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ನೀರಾವರಿ ಇಲಾಖೆಯಲ್ಲಿ ವರ್ಷಗಟ್ಟಲೆ ಕೆಲಸ ಮಾಡುತ್ತಿರುವ ಸೌಕರರ ಸಂಖ್ಯೆ ಎಷ್ಟು ;

ಆ) ಸದರಿ ಕೆಲಸಗಾರರನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ;

ಇ) ಉಳಿದವರನ್ನು ಇನ್ನೆಷ್ಟು ದಿನಗಳಲ್ಲಿ ಖಾಯಂಗೊಳಿಸಲಾಗುವುದು ?

ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು):—

ಅ) ದಿನಾಂಕ. 1-6-1983ರಂದು ಎಲ್ಲಾ ವರ್ಗದ ಹುದ್ದೆಗಳಲ್ಲಿ ಸುಮಾರು 15,974 ಮಂದಿ.

ಆ) ಸರ್ಕಾರದ ಆಜ್ಞೆ ನಂ. ಪಿ. ಡಿಬ್ಲ್ಯೂ. ಡಿ. 100., ಪಿ. ಡಬ್ಲ್ಯೂಸಿ. ಸಿ. 83. ದಿನಾಂಕ. 13-1-84ರಲ್ಲಿ ಸೂಚಿಸಿದ ನಿಯಮಗಳ ಪ್ರಕಾರ ಹಲವು ವರ್ಗಕ್ಕೆ ಸೇರಿದ ಗುಂಪು-ಡಿ ಹುದ್ದೆಗಳಲ್ಲಿರುವ ಸೌಕರರನ್ನು ಖಾಯಂಗೊಳಿಸಲಾಗುವುದು. ಇನ್ನಿತರ ಸೌಲಭ್ಯಗಳು, ಪತಕಾರಿಗಳು ಮೊದಲಾದ ವರ್ಗದ ಸೌಕರರ ಸಲುವಾಗಿ ನೀರಾವರಿ ಇಲಾಖೆಗೆ ಆಗತ್ಯವಾಗಿರುವ ಪೋಷಣೆ ಸ್ಥಾಪನೆಯ ಮಾದರಿಯ ಸಲುವಾಗಿ ಶಿಫಾರಸ್ಸು ಮಾಡಲು ಒಂದು ಉಪ ಸಮಿತಿಯು ನಿರ್ಮಾಣವಾಗಿದೆ.

ಇ) ಉಪ ಸಮಿತಿಯ ಶಿಫಾರಸ್ಸು ತಲುಪಿದೊಡನೆ ಸರ್ಕಾರವು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದು.

ವಿಷಯ : **1983-84ನೇ ಸಾಲಿನಲ್ಲಿ ರಾಜ್ಯದಲ್ಲಿ ತೆಗೆದುಕೊಂಡ ಸಣ್ಣ ನೀರಾವರಿ ಕೆಲಸಗಳು**

ಪ್ರಶ್ನೆ : 186(472) ಶ್ರೀ ಬಿ. ಜೆ. ಬಣಕಾರ್ (ಬೇಡಕೇರೂರು).— ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) 1983-84ನೇ ಸಾಲಿನಲ್ಲಿ 15 ಕೋಟಿ ರೂಪಾಯಿ ಅಂದಾಜಿನ 387 ಹೊಸ ಸಣ್ಣ ನೀರಾವರಿ ಯೋಜನೆ ಕೆಲಸಗಳನ್ನು ಕರ್ನಾಟಕ ರಾಜ್ಯದಲ್ಲಿ ತೆಗೆದುಕೊಳ್ಳಲು ಸರ್ಕಾರದವರು ಉದ್ದೇಶಿಸಿರುವುದು ನಿಜವೇ ? ತಾಲ್ಲೂಕುವಾರು ಯೋಜನೆಗಳ ಹೆಸರು ಹಾಗೂ ಅವುಗಳಿಗೆ ತೆಗೆದು ಇಟ್ಟಿರುವ ಹಣದ ವಿವರಗಳನ್ನು ತಿಳಿಸಬೇಕೆಂದು ವಿನಂತಿ ;

ಆ) ವಿಶ್ವ ಬ್ಯಾಂಕ್ ನೆರವಿನಿಂದ ಸುಮಾರು 65 ಕೋಟಿ ರೂಪಾಯಿಗಳ ಅಂದಾಜಿನ 68 ಹೊಸ ಕೆರೆಗಳನ್ನು ಕಟ್ಟಲು ಸರ್ಕಾರದವರ ಯೋಜನೆ ಇರುವುದು ನಿಜವೇ ? (ಈ ಕೆರೆಗಳ ಬಗ್ಗೆ ತಾಲ್ಲೂಕುವಾರು ಹೆಸರು ಹಾಗೂ ಅವುಗಳಿಗಾಗಿ ಮೀಸಲಿಟ್ಟ ಹಣದ ವಿವರ ಒದಗಿಸುವುದು ;

ಉತ್ತರ : ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಹೌದು. ವಿವರಗಳನ್ನು ಲಗತ್ತಿಸಲಾಗಿದೆ.

ಆ) ಹೌದು. ವಿವರಗಳನ್ನು ಲಗತ್ತಿಸಲಾಗಿದೆ.

LIST OF NEW MINOR IRRIGATION WORKS
ABSTRACT

Rupees in lakhs

Sl. No.	District	No. of work	Estimated cost	Budget Provision
1.	Bangalore	33	85.52	17.40
2.	Tumkur	57	130.16	27.75
3.	Kolar	41	137.64	29.24